ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/26/ಸ್ಕಿಲ್ ಡೆವಲಪ್/ಸಿಸಿಟೆಕ್/2017-18 12799

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:22-01-2018

## -: ಸುತ್ತೋಲೆ :-

ವಿಷಯ: ಮಾನ್ಯ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ (CMKKY)ಯನ್ನು ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ:ಡಿಟಿಇ/08/ಸಿಸಿಟೆಕ್/ 2016, ದಿ: 16-08-2017
2. ಡಾ॥ ಸುಭಾಷ್ ಚಂದ್ರ ಕುಂಟಿಆ, ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಏಜೆನ್ಸಿ ರವರ ಅಧ್ಯಕ್ಷತೆಯಲ್ಲಿ ದಿ: 18-01-2018 ರಂದು ನಡೆದ ಸಭೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿದ್ದು, ಈ ಕುರಿತು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಸದರಿ ವಿಷಯದ ಸಂಬಂಧ ದಿನಾಂಕ:18-01-2018 ರಂದು ಕೌಶಲ್ಯ ಭವನ, ಬೆಂಗಳೂರು ಇಲ್ಲಿ ನಡೆದ ಸಭೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮುಖಾಂತರ CMKKY ಯೋಜನೆಯಡಿಯಲ್ಲಿ 2017-18ನೇ ಸಾಲಿನ ಕೌಶಲ್ಯ ಅಭಿವೃದ್ಧಿ ತರಬೇತಿಯಲ್ಲಿ ಗುರಿಸಾಧಿಸಿಲ್ಲದ ಕಾರಣ ಪ್ರಸ್ತುತ ಸಾಲಿನ ಉಳಿದ ಜನವರಿ/ ಫೆಬ್ರವರಿ ಮತ್ತು ಮಾರ್ಚ್ 2018ರ ಅಂತ್ಯಕ್ಕೆ ಕೌಶಲ್ಯ ಅಭಿವೃದ್ಧಿ ತರಬೇತಿಯ ಗುರಿಸಾಧಿಸಲು ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ವೆಬ್ ಸೈಟ್ www.kaushalkar.com ನಲ್ಲಿ ನೋಂದಾಯಿಸಲ್ಪಟ್ಟ ಅಭ್ಯರ್ಥಿಗಳಿಗೆ ಕಂಪ್ಯೂಟರ್ ತರಬೇತಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ CCTEK ಉಪಘಟಕಗಳ ಮೂಲಕ ನೀಡುವುದರ ಸಂಬಂಧ ಮಾಹಿತಿಯನ್ನು ಕೋರಲಾಗಿದೆ.

ಸಂಬಂಧಿಸಿದಂತೆ CMKKY ನಿಯಮಾನುಸಾರ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಶೇಕಡ 100 ರಷ್ಟು ಉದ್ಯೋಗ ಕಲ್ಪಿಸುವುದು ಕಡ್ಡಾಯಗೊಳಿಸಲಾಗಿದೆ. ಈ ತರಬೇತಿಗಳು 2018 ಮಾರ್ಚ್ ಅಂತ್ಯಕ್ಕೆ ಪೂರ್ಣವಾಗಬೇಕಾಗಿರುತ್ತದೆ ಹಾಗೂ ತರಬೇತಿ ನೀಡುವ ಸಂಸ್ಥೆಗಳು www.kaushalkar.com ವೆಬ್ ಸೈಟನಲ್ಲಿ "Training Provider" ಆಗಿ "Training Provider Application form(TPAF)" ನಲ್ಲಿ ಆನ್ ಲೈನ್ ಮೂಲಕ ನೋಂದಣಿ ಮಾಡಬೇಕಾಗುತ್ತದೆ ಹಾಗು ಈ ಸಂಬಂಧ ಹೆಚ್ಚಿನ ಮಾಹಿತಿಯನ್ನು www.kaushalkar.com ವೆಬ್ ಸೈಟನಲ್ಲಿ ಪಡೆಯಬಹುದಾಗಿದೆ.

ಈ ಹಿನ್ನೆಲೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಸಂಸ್ಥೆಯಲ್ಲಿ ಲಭ್ಯವಿರುವ ಕಂಪ್ಯೂಟರ್ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ದೈನಂದಿನ ತರಗತಿಗಳಿಗೆ ತೊಂದರೆಯಾಗದಂತೆ, ಸ್ಥಳಿಯವಾಗಿ ಯಾವ ಯಾವ ಕಂಪ್ಯೂಟರ್ ಕೌಶಲ್ಯ ತರಬೇತಿಗಳನ್ನು ಆಯೋಜಿಸಬಹುದಾಗಿದೆ ಎಂಬುದನ್ನು ಪರಿಶೀಲಿಸಿ, ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿಮಾಡಿದ ಪ್ರಸ್ತಾವನೆಯನ್ನು ದಿ:25-01-2018 ರೊಳಗಾಗಿ ನಿರ್ದೇಶನಾಲಯಕ್ಕೆ ಕಳುಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಡಿಟಿಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ

# ನಮೂನೆ:

ಸಂಸ್ಥೆಯ ಹೆಸರು:

ಪ್ರಾಂಶುಪಾಲರ ಹೆಸರು/ಮೊಬೈಲ್ ನಂ:

ಸಂಸ್ಥೆಯ CCTEK ಮ್ಯಾನೇಜರ್ ಹೆಸರು/ಮೊಬೈಲ್ ನಂ:

ಮಾರ್ಚ್ 2018ರ ಅಂತ್ಯಕ್ಕೆ ನೀಡಬಹುದಾದ ತರಬೇತಿ ವಿವರ

| ಕ್ರಮ ಸಂಖ್ಯೆ | ಆಯೋಜಿಸಲಾಗುವ ಕಂಪ್ಯೂಟರ್ ಸ್ಕಿಲ್ ತರಬೇತಿ ಹೆಸರು | ಅಭ್ಯರ್ಥಿಗಳ ಸಂಖ್ಯೆ | ಕಾಲವಧಿ | ಹೊಂದಬಹುದಾದ ಉದ್ಯೋಗದ ವಿವರ |
|---|---|---|---|---|
| ೧ | | | | |
| ೨ | | | | |
| ೩ | | | | |
| ೪ | | | | |
| ೫ | | | | |

ಪ್ರಾಂಶುಪಾಲರು